International Journal of Kannada Research
www.kannadajournal.com

**ISSN: 2454–5813**
IJSR 2017; 3(1): 52-53
© 2017 IJKS
www.kannadajournal.com
Received: 15-11-2016
Accepted: 19-12-2016

**ಡಾ.ಚಂದ್ರಾವತಿ ಶೆಟ್ಟಿ,**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು, ಕರ್ನಾಟಕ, ಭಾರತ

**Correspondence**
**ಡಾ.ಚಂದ್ರಾವತಿ ಶೆಟ್ಟಿ,**
ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು, ಕರ್ನಾಟಕ, ಭಾರತ

# ಯಕ್ಷಗಾನ ತಾಳಮದ್ದಳೆ ಕಲೆಯ ಅನನ್ಯತೆ

**ಡಾ.ಚಂದ್ರಾವತಿ ಶೆಟ್ಟಿ**

**ಪೀಠಿಕೆ**

ಯಕ್ಷಗಾನ ತಾಳಮದ್ದಳೆ ಒಂದು ವಿಶಿಷ್ಟವಾದ ಕಲೆ. ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬಹು ಪ್ರಸಿದ್ದವಾದ ಈ ಕಲೆಯು, ಯಕ್ಷಗಾನದಿಂದ ಪ್ರೇರಿತವಾದ ಆದರೆ ಯಕ್ಷಗಾನಕ್ಕಿಂತ ಭಿನ್ನವಾಗಿ ಬೆಳೆದ ಒಂದು ಕಲಾ ಪ್ರಕಾರವಾಗಿದೆ. ತಾಳಧಾರಿಗಳಾದ ಭಾಗವತರು ಮೃದಂಗವಾದನದ ಮೇಳವಿಟ್ಟುಕೊಂಡು ಆಖ್ಯಾನವನ್ನು ಹೇಳುವುದರಿಂದ ಈ ಕಲೆಗೆ 'ತಾಳಮದ್ದಳೆ' ಎಂಬ ಹೆಸರು ಬಂದಿರಲೂಬಹುದು.

ಯಕ್ಷಗಾನ ತಾಳಮದ್ದಳೆ ಒಂದು ಅನನ್ಯ ಮಾತಿನ ಕಲೆ. ಇದೊಂದು ನಾಟಕ ಕಲೆಯೇ ಆಗಿದ್ದರೂ, ಇಲ್ಲಿಯ ಪಾತ್ರಗಳು ಯಾವ ರಂಗೋಪಕರಣಗಳನ್ನು ಬಳಕೆಮಾಡುವುದಿಲ್ಲ. ಕೇವಲ ತನ್ನ ಸಂಭಾಷಣೆಯೊಂದರ ಮೂಲಕವೇ ಸಹಜ ಅನನ್ಯತೆನ್ನುಂಟು ಮಾಡುವುದು ಈ ಕಲೆಯ ಒಂದು ವೈಶಿಷ್ಟ್ಯ. ಕೇವಲ ಸಂಭಾಷಣೆ ಅಥವಾ ಪಾತ್ರಗಳ ಮಾತುಗಳಷ್ಟೇ ಈ ಕಲೆಯನ್ನು ನಡೆಸಿಕೊಂಡು ಹೋಗುವುದೇ ಇದರ ಅನನ್ಯತೆಗೆ ಕಾರಣವಾಗಿದೆ.

'ತಾಳಮದ್ದಳೆ' ಮೂಲತಃ ಯಕ್ಷಗಾನದ ಭಾಗ; ಪೂರ್ಣ ಯಕ್ಷಗಾನದ ಕೆಲ ಅಂಶಗಳನ್ನು ಒಳಗೊಂಡ ಒಂದು ಮಾತಿನ ಕಲೆ. ಈ ಕಲೆಯಲ್ಲಿ ಪಾತ್ರಾಧಾರಿಗಳು ಬಣ್ಣ ಹಚ್ಚಿಕೊಳ್ಳುವುದಿಲ್ಲ. ವೇಷಭೂಷಣ ಧರಿಸುವುದಿಲ್ಲ. ಈ ಕಲೆಯಲ್ಲಿ ಅಭಿನಯವೂ ಇಲ್ಲ, ರಂಗಭೂಮಿಯೂ ಇಲ್ಲ. ಪುರಾಣದ ಯಾವುದೋ ಒಂದು ಸನ್ನಿವೇಶವನ್ನು ಆಯ್ದುಕೊಂಡು ಅದನ್ನು ಕಲಾವಿದರು ಅಥವಾ ಅರ್ಥಧಾರಿಗಳು ತಮ್ಮ ಮಾತಿನ ಮೂಲಕ ಕಲೆಯನ್ನಾಗಿ ಪ್ರಸ್ತುತ ಪಡಿಸುತ್ತಾರೆ. ಇದರಲ್ಲಿ ಕಲಾವಿದರು ಕೈ–ಕಣ್ಣು–ಮುಖಗಳಿಂದ ಭಾವ ಪ್ರದರ್ಶನವನ್ನು ಮಾಡುತ್ತಾರೆ. ಭಾಗವತರೇ ಇಲ್ಲಿ ಸೂತ್ರಧಾರರಾಗಿರುತ್ತಾರೆ. ಯಕ್ಷಗಾನ ಪ್ರದರ್ಶನದಲ್ಲಿ ಇರುವಂತೆ ಯಕ್ಷಗಾನ ತಾಳಮದ್ದಲೆಯ ಹಿಮ್ಮೇಳನದಲ್ಲಿ ಕತೆಯನ್ನು ಸಣ್ಣ ಸಣ್ಣ ಹಾಡುಗಳಾಗಿ ಭಾಗವತರು ಹಾಡುತ್ತಾರೆ. ತನ್ನ ಹಾಡಿನ ಮೂಲಕ ತಾಳಮದ್ದಳೆಯಲ್ಲಿ ಭಾಗವತರು ಒಬ್ಬ ಪಾತ್ರಧಾರನ (ಅರ್ಥದಾರಿ) ಮಾತಿಗೆ ಒನ್ನೊಬ್ಬ ಪಾತ್ರಧಾರ ಉತ್ತರ ಕೊಡಲು ದಾರಿ ಮಾಡಿಕೊಡುತ್ತಾರೆ.

ಯಕ್ಷಗಾನ ತಾಳಮದ್ದಲೆ ಕಲೆಯು ಭಿನ್ನವಾದ ಭಾವನೆಗಳ ಜೊತೆಗಿನ ಸಂವಾದಗಳ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ, ಇಲ್ಲಿನ ಕಲಾವಿದರು ಇತಿಹಾಸ ಪುರಾಣಗಳು ಮತ್ತು ಕೆಲವು ಶಾಸ್ತ್ರಗಳ ಉತ್ತಮ ಜ್ಞಾನದ ಜೊತೆಗೆ ಭಾಷೆಯಲ್ಲಿ ಪ್ರಾವೀಣ್ಯತೆಯನ್ನು ಹೊಂದಿರಬೇಕು. ಪುರಾಣದ ಯಾವುದೋ ಒಂದು ಸನ್ನಿವೇಶವನ್ನು ಆಯ್ದುಕೊಂಡು ಇಲ್ಲಿ ಅರ್ಥಧಾರಿಗಳು ತಮ್ಮ ಮಾತಿನ ಮೂಲಕ ಕತೆಯನ್ನಾಗಿ ಪ್ರಸ್ತುತಿಸುವುದು ಕೂಡ ಯಕ್ಷಗಾನ ತಾಳಮದ್ದಳೆಯ ಅನನ್ಯತೆಯಾಗಿದೆ.

ಯಕ್ಷಗಾನ ತಾಳಮದ್ದಳೆಯು ಮಾತಿನ ರಂಗಭೂಮಿ ಅನಿಸಿಕೊಂಡಿದೆ. ತಾಳಮದ್ದಳೆಯು ಹಾಡು ಮತ್ತು ಮಾತುಗಳಿಗಿರುವ ವೇಷ ಮತ್ತು ಕುಣಿತಗಳಿಲ್ಲದ ಯಕ್ಷಗಾನ. ತಾಳಮದ್ದಳೆಯಲ್ಲಿ ಮಾತುಗಾರಿಕೆ ನಾಟಕದಲ್ಲಿ ಇರುವಂತೆ ಪೂರ್ವ ನಿರ್ಧರಿತ ಸಂಭಾಷಣೆಗಳ ರೂಪದಲ್ಲಿ ಇರುವುದಿಲ್ಲ. ಕಥೆಯ ಪರಿಧಿಯೊಳಗೆ ಯಕ್ಷಗಾನದ ಮಾತಿನ ಶೈಲಿಯನ್ನು ಬಿಡದೆ, ತಮಗನಿಸಿದ ಶಬ್ದಗಳಲ್ಲಿ ಮತ್ತು ವಾಕ್ಯಗಳಲ್ಲಿ ಪಾತ್ರೋಚಿತವಾದ ಮಾತುಗಳನ್ನು ಆಡುವ ಸಂಪೂರ್ಣ ಸ್ವಾತಂತ್ರ್ಯ ಇಲ್ಲಿಯ ಕಲಾವಿದರಿಗೆ ಇರುತ್ತದೆ. ಅಂತೆಯೇ ಒಂದೇ ಪಾತ್ರ ಬೇರೆ ಬೇರೆ ಕಲಾವಿದರ ಮಾತುಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಪ್ರೇಕ್ಷಕರನ್ನು ತಲುಪುತ್ತದೆ.

ಯಕ್ಷಗಾನ ತಾಳಮದ್ದಳೆಯಲ್ಲಿ ಯಾವುದಾದರೊಂದು ಪೌರಾಣಿಕ ಹೆಚ್ಚಾಗಿ ಕಡಿಮೆ ಪಾತ್ರಗಳಿರುವ ಮಾತಿಗೆ ಮತ್ತು ಚರ್ಚೆಗೆ ಹೆಚ್ಚು ಅವಕಾಶವಿರುವ ಪ್ರಸಂಗಗಳನ್ನು ಆಡಿ ತೋರಿಸುವುದೇ ಇದರ

ಅನನ್ಯತೆಯಾಗಿದೆ. ಈ ಕಲೆಯ ಪಾತ್ರಧಾರಿಗಳು (ಅರ್ಥಧಾರಿಗಳು) ಯಾವುದೇ ವೇಷ–ಭೂಷಣಗಳಿಲ್ಲದೇ ಎದುರು–ಬದುರಾಗಿ ಕುಳಿತುಕೊಂಡು ಮಾತುಗಾರಿಕೆಗೆ ತೊಡಗುತ್ತಾರೆ. ಹೀಗೆ ಆಯ್ಕೆ ಮಾಡಿಕೊಂಡಿರುವ ಪ್ರಸಂಗದಲ್ಲಿ ತಾವು ಪಾತ್ರವಾಗುವುದರ ಜೊತೆಗೆ ಪ್ರೇಕ್ಷಕರನ್ನು ತಮ್ಮ ಮಾತಿನ ವೈಖರಿಯ ಮೂಲಕ ಆ ಪಾತ್ರದ ಪರಿಧಿಯೊಳಗೆ ಸೆಳೆಯುತ್ತಾರೆ. ಇಲ್ಲಿನ ಅರ್ಥದಾರಿಗೆ ತನ್ನ ಮಾತೇ ಕವಚ, ಬಿಲ್ಲು, ಬಾಣ ಎಲ್ಲ. ಪ್ರೇಕ್ಷಕರನ್ನು ಕೇವಲ ತನ್ನ ಮಾತುಗಳಲ್ಲಿ ಕಟ್ಟಿ ಹಾಕುವಂತಹ ಮಾತಿನ ಚಾಕಚಕ್ಯತೆ ತಾಳಮದ್ದಳೆ ಕಲೆಯ ಅನನ್ಯತೆಯ ಅಂಶವಾಗಿದೆ.

ತಾಳಮದ್ದಳೆಯನ್ನು ಕೇಳುವವರಿಗೆ ಪ್ರಸಂಗದಲ್ಲಿ ಬರುವ ಕತೆ ಮೊದಲೇ ತಿಳಿದಿರುತ್ತದೆ. ಕತೆಯನ್ನು ಕೇಳಲು ಇಲ್ಲಿ ಪ್ರೇಕ್ಷಕರು ಬರುವುದಿಲ್ಲ ಬದಲಾಗಿ ಕಲಾವಿದರ ಮಾತುಗಳಲ್ಲಿ ವಿಭಿನ್ನವಾಗಿ ಅವತರಿಸುವ ಪಾತ್ರಗಳನ್ನು ಅನುಭವಿಸಲು ತಾಳಮದ್ದಳೆಗಳಿಗೆ ಪ್ರೇಕ್ಷಕರು ಸೇರುವುದು ಕೂಡ ಈ ಕಲೆಯ ಒಂದು ಅನನ್ಯತೆ ಎಂತಲೇ ಹೇಳಬಹುದು. ಮಾತುಗಾರಿಕೆಯ ಮೂಲಕ ಇಲ್ಲಿನ ಕಲಾವಿದರು ಕತೆಗೆ ನೀಡುವ ಹೊಸ ಆಯಾಮ ತಾಳಮದ್ದಳೆಗೆ ಜನರನ್ನು ಆಕರ್ಷಿಸುವಂತಹ ಅನನ್ಯತೆಯನ್ನು ಸಾಧಿಸಿದೆ. ಈ ಕಲೆಯಲ್ಲಿ ಅಖ್ಯಾನಕ್ಕಿಂತ ವ್ಯಾಖ್ಯಾನಕ್ಕೆ ಹೆಚ್ಚು ಪ್ರಾಮುಖ್ಯತೆ ಇರುವುದು.

ಒಟ್ಟಂದದಲ್ಲಿ ಹೇಳುವುದಾದರೆ ತಾಳಮದ್ದಳೆ ಒಂದು ಆಶು ಮಾತುಗಾರಿಕೆಯ ಕಲೆ. ಇಲ್ಲಿ ಬೇರೆ ಬೇರೆ ಕಲಾವಿದರು ಒಂದೇ ಹಾಡಿಗೆ ಬೇರೆ ಬೇರೆ ರೀತಿಯಲ್ಲಿ ಅರ್ಥ ಕಟ್ಟಿಕೊಡುವಂತೆ, ಒಬ್ಬನೇ ಕಲಾವಿದ ಒಂದೇ ಪಾತ್ರನ್ನು ಬೇರೆ ಬೇರೆ ಸನ್ನಿವೇಶದಲ್ಲಿ ನಿರ್ವಹಿಸುವಾಗಲೂ ಮೂಡಿ ಬರುವ ಪಾತ್ರ ಚಿತ್ರಣ ವಿಭಿನ್ನವಾಗಿರುತ್ತದೆ. ಈ ರೀತಿಯಲ್ಲಿ ಪುರಾಣಕತೆಯನ್ನು ಮಾತಿನ ಮೂಲಕವೇ ಪ್ರಸ್ತುತಪಡಿಸುವ ಇನ್ನೊಂದು ಕಲೆ ಇಲ್ಲ ಎನ್ನುವುದು ಕೂಡ ತಾಳಮದ್ದಳೆ ಕಲೆಯ ಅನನ್ಯತೆ.

**ಗ್ರಂಥ ಋಣ**

1. ಬ್ಲಾಗ್ – ಸಾಹಿತಿ ಯಕ್ಷಗಾನ ಅರ್ಥಧಾರಿ ಪ್ರಸಂಗ ಕರ್ತೃ ಶ್ರೀಧರ ಡಿ. ಜನವರಿ 2022.
2. ವಿಶ್ವಕೋಶ– ಮೈಸೂರು ವಿಶ್ವ ವಿದ್ಯಾನಿಲಯ ಪ್ರಕಟಣೆ– ಮೈಸೂರು ವಿಶ್ವ ವಿದ್ಯಾನಿಲಯ ಮೈಸೂರು– 1916.
3. 'ಕರ್ನಾಟಕ ಜನಪದ ಕಲೆಗಳು' ರೇಣುಕಾ ಕೋಡಗುಂಟಿ
4. ಪ್ರಕಾಶಕರು: ಬಂಡಾರ ಪ್ರಕಾಶನ ರಾಯಚೂರು. –2023.